ಅಂದವರೆ ಅಂತ ಪುರಾಣ ಓದೋವಾಗ ನೀವೇ ಹೇಳ್ತಿರಲ್ಲ ಅಪ್ಪಯ್ಯ. ಒಳಗೇನೆ ಕೂರಿಸಬಹುದಿತ್ತಲ್ಲಾ?' 'ಮಳ್ಳೆ. ನಮ್ಮದೇನು ಮಹಾಮನೆ ಏನೆ? ಇದೇನು ಹನ್ನೆಲ್ಡನೇ ಶತಮಾನ್ವಾ?' ಪಕ್ಕನೆ ನಕ್ಕುಬಿಟ್ಟ ಬಸಯ್ಯ.

ಕೋಟೆ ಬೀದಿಯಾಗೆ ಬರೋವಾಗ ನಿಂಗನೂ ಮಗನ ವಿಚಾರಣೆ ಕೈಗೊಂಡ. 'ದೊಡ್ಡೋರ ಮಕ್ಕಳ್ತಾವ ನಿಂದೇನ್ಲಾ ಮಾತು? ಅದೂ ಹೆಣ್ಣುಹೆಂಗ್ಸಿಂತಾವ?' 'ಮಾತಾಡಿದ್ದು ಅವಳೇ ಕಣಪ್ಪೋ ನಾನು ನಕ್ಕೆ ಅಟೆಯಾ' 'ಇದೇ ಹುಡ್ಗಿನೇ ಅಲ್ಲೇನ್ ನೀನು ಕೆಲಸ ಮಾಡೋ ತಾವ ಬಂದು ಹಗ್ಲಗಲ ನಿಂದ್ರೋದು?' 'ಬೇರೆ ಹುಡ್ಗೀರು ಬರ್ತಾರೇಳಪ್ಪೋ' ಸಣ್ಣಗೆ ದಬಾಯಿಸಿದ ಮಾದ. 'ನೀನು ದ್ಯಾವರ ಇಗ್ರಹಗುಳ್ನ ಮಾಡೋದು ಬಿಡು ಆವಾಗ ಇವ್ರೂ ಸುಳಿಯೋದಿಲ್ಲಲೆ. ನಮ್ಮ ಕಸಬೇನಿದ್ರೂ ಕಲ್ಲುಕಟೆಯೋದು ಬಂಡೆ ಒಡೆಯೋದು ಕೋಟೆ ಕಟ್ಟೋದು ಅಟೆ' ದುರುಗುಟ್ಟಿದನೀಗ ನಿಂಗ.

'ಹರೇವು ಅನ್ನೋದು ಹಬ್ಬಿದಂಗೆ' ಅಂಬೋ ಹಿರೀಕರು ಮಾತು ಮಾದನ್ನ ನೋಡೋವಾಗ ಯಾರಿಗಾನ ಖರೆ ಅನ್ನಿಸೋದು. ಯಾವ ಕೆಲಸವಾಗ್ಲಿ ಮೈಮ್ಯಾಗೆ ಎಳ್ಕೊಂಡು ಗೆಯ್ಯೋನು. ಬಂಡೆಗಳಿಗೆ ಚಾಣ ಇಕ್ಕಿ ಸಾಲಾಗಿ ಕೊರೆಯೋದು. ಅದಕ್ಕೆ ಮದ್ದಿಕ್ಕಿ ಉಡಾಯಿಸೋದು. ಬಂಡೆ ತುಂಡರಿಸೋದು ಚೌಕಾಕಾರವಾಗಿ ಕಟೆದು ನಯಸ್ಸು ಮಾಡೋದು. ಬಂಡೆಗೆ ಸರಪಳಿ ಕಟ್ಟಿ ಆನೆಗಳಿಂದ ಎಳೆಸೋದು, ಬಂಡೆಗಳ ಮೇಲೆ ಬಂಡೆಗಳನ್ನಿರಿಸಿ ಜೋಡಿಸೋದು ಎಲ್ಲಾ ಅಚ್ಚುಕಟ್ಟು. ಬಂಡೆಗಳ ನಡುವೆ ಕರನೆಯಿಂದ ಗಾರೆ ಸವರೋ ಗಾರೆಕೆಲಸದವರಿಗೂ ಅವನೆಂದರೆ ಮೆಚ್ಚು. ಸೇನಾಧಿಪತಿ ಪರಶುರಾಮಪ್ಪನೋರೆ ಇವನ ಬೆನ್ನು ತಟ್ಟಿ. 'ಭಲೆ ಗಂಡಯ್ಯ ನೀನು. ಒಂದಿನ ನೀನು ಖಾಲಿ ಕುಂತಿದ್ದು ನೋಡಿಲ್ಲ ನಾನು! ಭೇಷ್' ಅಂತ ತಾರೀಫು ಮಾಡೋರು. ಇಷ್ಟೇ ಆಗಿದ್ದಿದ್ದರೆ ಚೆಂದಿತ್ತು. ಇದ್ದಕ್ಕಿದ್ದಂಗೆ ಇವನಿಗೆ ವಿಗ್ರಹಗಳನ್ನು ಕೆತ್ತೋ ಹುಚ್ಚು ಯಾಕೆ ಹತ್ಕಂತೋ ಸಿವನೇ ಬಲ್ಲ! ಕರಿಕಲ್ಲುಗಳನ್ನು ಆರಿಸಿ ತಂದು ಮೊದಲು ಶಿವಲಿಂಗಗಳನ್ನು ಕೆತ್ತಿಟ್ಟಾಗ ತಂದೆ ನಿಂಗ, ತಾಯಿ ರಾಮಕ್ಕ ನಾಕು ಹೂ ಏರ್ಸಿ ಶಣ್ಣು ಮಾಡಿದರು. ಹಾದಿಯಾಗ ಹೋಗೋ ಮಂದಿ ನೋಡಿ ಮೆಚ್ಕೊಂಡು ಇವನು ಕೇಳಿದೋಟು ರೊಕ್ಕ ಕೊಟ್ಟು ಕೊಂಡಾಗ ಹೆತ್ತೋರಿಗೆ ಸ್ವರ್ಗ ಮೂರೇ ಗೇಣು. ಯಾವಾಗ ಜನ ತನ್ನ ಕೆತ್ತನೆಯೂ ಇಷ್ಟಪಡ್ತಾರೆಂಬುದು ಅರಿವಿಗೆ ಬರುತ್ತಲೇ ದಿನವೂ ಕುಂತು ಎತ್ತರದ ಪೀಠದ ಮ್ಯಾಗೆ ಕುಂತಿರುವ ಗಣಪನ್ನ ಕೆತ್ತಿಟ್ಟುಬಿಟ್ಟ. ಎರಡೇ ದಿನದಾಗೆ ಚಿಲ್ಲರೆ ಕಾಸು ರಾಮಕ್ಕನ ಬಾಳೆಕಾಯಿ ಗಂಟು ಸೇರ್ತು. 'ಮಾಡೋ ಮಗ್ನೆ ದ್ಯಾವರ ವರ ನಿನ್ ಮ್ಯಾಗೈತೆ' ಕುಮ್ಮಕ್ಕು ನೀಡಿದ್ದು ತಾಯಿ. 'ಮಾಡೋ ಬದುಕು ಬಿಟ್ಟು ಅದೇನೋ ಹರಿದ್ನಂತೆ. ನೋಡಲೆ ಒಂದಿನ ಕೆಲಸ ತಪ್ಪಿಸಿದ್ರೆ ಕೂಲಿ ಸಿಗಾಕಿಲ್ಲ ಕಣೋ' ನಿಂಗ ಕೂಗಾಡಿದ. ಮಾದ ಕೆಲಸಕ್ಕೆಂದೂ ಗೈರಾಗಲಿಲ್ಲ. ಸಂಜೆಯ ನಂತರ ತನ್ನ ಕುಶಲಗಾರಿಕೆ ಶುರುಹಚ್ಚಿಕೊಂಡ. ಚಂದ್ರನ ಬೆಳಕು ಬುಡ್ಡಿ ಬೆಳಕು ಅವನ ಜೊತೆ ನಿದ್ದೆಗೆಟ್ಟವು.

ಎರಡನೆ ಸುತ್ತಿನ ಗಾರೆಬಾಗಿಲುಕೋಟೆ ಸಾಲಿನ ಬಳಿ ಇರೋ ಕಾಮನಬಾವಿ ಎದುರಿನ ಬಯಲ್ನಾಗೆ ಮಾದನ ಪುಟ್ಟ ಜೋಪಡಿ. ಅದರ ಮುಂದಾಗಡೆ ಚಪ್ಪರ ಹಾಕಿ ಅಲ್ಲೇ ಅಪ್ಪ ಮಗನ ಕಸಬು. ಕೋಟೆ ಕಟ್ಟೋದು ಹೊಟ್ಟೆಪಾಡಿನ ದುಡಿಮೆ. ಬಿಡುವಾದಾಗ ಚಪ್ಪರದಡಿ ಕುತ್ಕಂಡು ಒರಳುಕಲ್ಲು ರುಬ್ಬೋಗುಂಡು ಖಾರ ಅರೆಯೋ ಬಂಡೆಗಲ್ಲು ರೋಣಗಲ್ಲುಗಳನ್ನು ಮಾಡೋರು. ಇದನ್ನು ಕೋಣಗಳಿಂದ ಎಳೆಸಿ ನೆಲ ಮಟ್ಟಸ ಮಾಡುತ್ತಿದ್ದುದರಿಂದ ಹೆಚ್ಚು ಕಾಸು ಸಿಗೋದು. ಫಿರಂಗಿಗೆ ಬೇಕಾದ ಗುಂಡುಗಳನ್ನು ಮಾಡೋದ್ರಾಗೂ ಮಾದ ನಿಸ್ಸೀಮ.